

# ಕವಲು ದಾರಿಯಲ್ಲಿ ಹೇಮಂತ್

ಈಚೆಗೆ ಬಿಡುಗಡೆಯಾಗಿರುವ 'ಅಜ್ಞಾತವಾಸಿ' ಸಿನಿಮಾ ಮೂಲಕ ಚಿತ್ರ ನಿರ್ಮಾಣ ಕ್ಷೇತ್ರದಲ್ಲಿ ಮೊದಲ ಹೆಜ್ಜೆ ಇಟ್ಟಿರುವ ನಿರ್ದೇಶಕ ಹೇಮಂತ್ ಎಂ. ರಾವ್, ತಮ್ಮ 'ದಾಕ್ಷಾಯಿಣಿ ಟಾಕೀಸ್' ಬ್ಯಾನರ್‌ನಲ್ಲಿ ಸಿನಿಮಾ ಹೊರತಂದಿದ್ದಾರೆ. ಜೊತೆಗೆ ಈ ಬ್ಯಾನರ್ ಅಡಿ ಹಲವು ಅತ್ಯುತ್ತಮ ಕಥೆಗಳನ್ನು ಜನರ ಮುಂದೆ ತರುವ ಉದ್ದೇಶವಿರುವುದಾಗಿಯೂ ತಿಳಿಸಿದ್ದಾರೆ.

'ಹಂಬಲ್ ಪೊಲಿಟಿಷಿಯನ್ ನೋಗರಾಜ್' ಸಿನಿಮಾದಲ್ಲಿ ನಿರ್ಮಾಣದಲ್ಲಿ ಅನುಭವ ಪಡೆದುಕೊಂಡಿದ್ದ ಹೇಮಂತ್, ಇದೀಗ ಸ್ವಂತ ಬ್ಯಾನರ್ ಮೂಲಕ ಸಿನಿಮಾ ನಿರ್ಮಿಸಿದ್ದಾರೆ. ತಮ್ಮ ನಿರ್ಮಾಣದಲ್ಲಿ ಮೂಡಿಬಂದ ಮೊದಲ ಸಿನಿಮಾ 'ಅಜ್ಞಾತವಾಸಿ' ತಮಗೆ ಭಾವನಾತ್ಮಕವಾಗಿ ಬಹಳ ಹತ್ತಿರವಾಗಿರುವುದಾಗಿಯೂ ಹೇಳಿದ್ದಾರೆ.

'ನನ್ನ ತಾಯಿ ನನ್ನನ್ನು ಕಥೆಗಳಿಗೆ ಪರಿಚಯಿಸಿದವರು. ಅವರಿಗೆ ಕ್ಯಾನ್ಸರ್ ಆಗಿ ತೀರಿಕೊಂಡರು. ಅವರ ಹೆಸರಿಗೆ ಗೌರವ ತರಬೇಕೆಂದರೆ, ಆ ಹೆಸರಿನಲ್ಲಿ ಒಳ್ಳೆಯ ಕೆಲಸ ಮಾಡಬೇಕು. ಈ ಕಾರಣಕ್ಕೇ ದಾಕ್ಷಾಯಿಣಿ ಟಾಕೀಸ್ ಹುಟ್ಟಿಕೊಂಡಿದೆ' ಎಂದು ವಿವರಿಸಿದ್ದಾರೆ ಹೇಮಂತ್.

ದಾಕ್ಷಾಯಿಣಿ ಬರೀ ಚಿತ್ರಮಂದಿರದ ಸಿನಿಮಾಗಳಿಗೆ ಮಾತ್ರ ಸೀಮಿತವಾಗಿಲ್ಲ. ಭಿನ್ನ ಕಂಟೆಂಟ್‌ಗಳಿಗೆ ಸದಾ ಬಾಗಿಲು ತೆರೆದಿರುತ್ತದೆ ಎಂದಿದ್ದಾರೆ. 'ನಾವು ಪ್ರತಿ ಕಥೆಯನ್ನೂ ಥಿಯೇಟರ್‌ನಲ್ಲಿಯೇ ನೋಡಲು ಸಾಧ್ಯವಿಲ್ಲ. ಹೀಗಾಗಿ ಕಿರುಚಿತ್ರಗಳನ್ನೂ ಬಿಡುಗಡೆ ಮಾಡಲಾಗುತ್ತಿದೆ. ಒಳ್ಳೆಯ ಕಥೆಗಳ ಮೂಲಕ ನಾನು ಗುರುತಾಗಬೇಕು. ಒಳ್ಳೊಳ್ಳೆಯ ಕಥೆಗಳನ್ನು ಜನರಿಗೆ ನೀಡಬೇಕು. ಅದೇ ದಾಕ್ಷಾಯಿಣಿ ಟಾಕೀಸ್ ಗುರಿ' ಎಂದಿದ್ದಾರೆ.

ನಿರ್ಮಾಣಕ್ಕೆ ಬಂದ ಹಿನ್ನೆಲೆ ಕುರಿತ ಪ್ರಶ್ನೆಗೆ ಉತ್ತರಿಸಿರುವ ಅವರು, ''ಈ ಹಿಂದೆ ನನ್ನ ಕಥೆಗಳೊಂದಿಗೆ ಎಷ್ಟೋ ಬಾಗಿಲು ಬಡಿದಿದ್ದೇನೆ. ಕೆಲವೊಮ್ಮೆ ನಮ್ಮ ಜಾಗವನ್ನು ನಾವೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ನನಗೆ ಹಣ ಇರಲಿಲ್ಲ. ಹೀಗಾಗಿ ಲೋನ್ ತೆಗೆದುಕೊಂಡೆ. ಹಾಗೆ ರೂಪುಗೊಂಡಿದ್ದೇ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾ. ಇದನ್ನು ಪುಷ್ಕರ್ ಜೊತೆ ಸೇರಿ ಮಾಡಿದೆ. ಯಾರಾದರೂ ನನ್ನ ಸಿನಿಮಾ ನಿರ್ಮಾಣ ಮಾಡುತ್ತಾರೆ ಅಂದರೆ ನನಗೆ ಈಗಲೂ ಖುಷಿಯಾಗುತ್ತದೆ. ಆದರೆ ನಾನೂ ಆರಂಭಿಸುವ ಸಮಯ ಇದೆನ್ನಿಸಿತ್ತು'' ಎಂದು ಹೇಳಿದ್ದಾರೆ.

ನಿರ್ಮಾಪಕರು ಬೆಂಬಲ ನೀಡಬೇಕು, ಅಧಿಕಾರ ತೋರುವವರಾಗಿರಬಾರದು ಎಂಬ ಮಾತನ್ನೂ ಸೇರಿಸಿರುವ ಅವರು, ಒಂದು ಸಿನಿಮಾ ರೂಪುರೇಷೆಗೆ ಎಲ್ಲ ಅಂಶಗಳೂ ಮುಖ್ಯವಾಗುತ್ತವೆ ಎಂದಿದ್ದಾರೆ.

ಒಟಿಟಿಯಲ್ಲಿ ಕನ್ನಡ ಸಿನಿಮಾಗಳಿಗೆ ಇರುವ ತೊಡಕುಗಳ ಬಗ್ಗೆ ಮಾತು ಹಂಚಿಕೊಂಡು, 'ಈಗ ಮಾರ್ಕೆಟ್ ಬದಲಾಗಿದೆ. ಒಟಿಟಿ ಕೂಡ ಈ ಹಿಂದಿನಂತೆ ಬಲಿಷ್ಠವಾಗಿಲ್ಲ. ಈಗಲೂ ನಾವು ಗೌರವಿಸುವ ಜಾಗ ಚಿತ್ರಮಂದಿರ. ಮಲೆಯಾಳಂ ಸಿನಿಮಾರಂಗದಲ್ಲಿ ಈಗಲೂ ದೊಡ್ಡ ಸ್ಕ್ರೀನ್‌ಗಾಗಿಯೇ ಸಿನಿಮಾ ಮಾಡುವುದು. ಇಲ್ಲಿ ಬರಹಗಾರರಿಗೆ ಬಲವಾದ ಅಡಿಪಾಯ ಸೃಷ್ಟಿಯಾದರೆ ನಮ್ಮ ಸಿನಿಮಾರಂಗ ಕೂಡ ಅಭಿವೃದ್ಧಿಯಾಗುತ್ತದೆ' ಎಂದು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

## ಅನೂಪ್ ಸಿನಿಮಾ ತಂತ್ರ



ಈ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನದೊಂದಿಗೆ ಅಪ್‌ಡೇಟ್ ಆಗುವುದು ಬಹಳ ಮುಖ್ಯ ಎಂದಿರುವ ನಿರ್ದೇಶಕ ಅನೂಪ್ ಭಂಡಾರಿ, ಸಿನಿಮಾರಂಗದಲ್ಲಿಯೂ ಇದರ ಪ್ರಭಾವ ಕಾಣುತ್ತಿದ್ದು, ತಂತ್ರಜ್ಞಾನ ಸಿನಿಮಾ ತಯಾರಿಯ ವಿಧಾನವನ್ನೇ ಬದಲಿಸಬಲ್ಲದು ಎಂದಿದ್ದಾರೆ.

ನಟ ಸುದೀಪ್ ಜೊತೆ 'ಬಿಲ್ಲ ರಂಗ ಬಾಷಾ' ಸಿನಿಮಾ ಮಾಡುತ್ತಿರುವ ಅನೂಪ್ ಈ ಬಾರಿ ಮತ್ತಷ್ಟು ಆತ್ಮವಿಶ್ವಾಸದೊಂದಿಗೆ ಅಡಿಯಿಟ್ಟಿರುವುದಾಗಿ ಹೇಳಿದ್ದಾರೆ. ಸದ್ಯ ಸಿನಿಮಾಗೆ 'ಪ್ರಿ ವಿಷುವಲೈಸೇಷನ್' ತಂತ್ರವನ್ನು ಅನುಸರಿಸುತ್ತಿರುವುದಾಗಿಯೂ ಹೇಳಿಕೊಂಡಿದ್ದಾರೆ.

ಈ ತಂತ್ರಜ್ಞಾನದ ಬಗ್ಗೆ ವಿವರಿಸಿರುವ ಅವರು, 'ಇದೊಂದು ಹೊಸ ಪ್ರಯತ್ನ ಎನ್ನಬಹುದು. ಚಿತ್ರೀಕರಣವನ್ನು ಆರಂಭಿಸುವ ಮುನ್ನವೇ ದೃಶ್ಯಗಳನ್ನು ಯೋಜಿಸಿಕೊಳ್ಳುವ ಮತ್ತು ದೃಶ್ಯೀಕರಿಸುವ ಪ್ರಕ್ರಿಯೆಯಾಗಿ ಒಂದು ವಿಶಿಷ್ಟ ಪ್ರಯತ್ನ. ಸ್ಟೋರಿಬೋರ್ಡ್, 3ಡಿ ಅನಿಮೇಷನ್ ಹಾಗೂ ಡಿಜಿಟಲ್ ಟೂಲ್‌ಗಳನ್ನು ಬಳಸಿಕೊಂಡು ಸಿನಿಮಾದ ಒಂದು ಕಚ್ಚಾ ಆಯಾಮವನ್ನು ಸೃಷ್ಟಿಸುವುದು. ಇದು ಸಮಯ ಹಾಗೂ ಹಣ ಎರಡನ್ನೂ ಉಳಿಸುವ ತಂತ್ರ. ಚಿತ್ರೀಕರಣಕ್ಕೆ ಹೋಗುವ ಮುನ್ನವೇ ಒಂದು ಚಿತ್ರಣ ಸಿಗುವುದರಿಂದ ಕೆಲಸಗಳು ಸರಾಗವಾಗುತ್ತವೆ' ಎಂದಿದ್ದಾರೆ.

ಈಗ ಲಭ್ಯವಿರುವ, ದಿನೇ ದಿನೇ ಅಪ್‌ಡೇಟ್ ಆಗುತ್ತಿರುವ ತಂತ್ರಜ್ಞಾನದ ಕುರಿತು ತಿಳಿದುಕೊಂಡಿರುವುದು ಹಾಗೂ ಅದನ್ನು ಅಳವಡಿಸಲು ಕಲಿಯುವುದು ತುಂಬಾ ಮುಖ್ಯ. ಎಂಜಿನಿಯರ್ ಆಗಿ ನಾನು ಕೆಲವು ತಂತ್ರಗಳನ್ನು ಈ ಹಿಂದೆಯೂ ನನ್ನ ಸಿನಿಮಾಗಳಲ್ಲಿ ಅಳವಡಿಸಿಕೊಂಡಿದ್ದೇನೆ. 'ಬಿಲ್ಲ ರಂಗ ಬಾಷಾ' ಸಿನಿಮಾದಲ್ಲಿ ಡಬ್ಬಿಂಗ್‌ನಲ್ಲಿ ಪ್ರಯೋಗಿಸಿದ್ದೇವೆ. ಕೆಲವು ಗಂಟೆಗಳ ವಾಯ್ಸ್ ಡೇಟಾ ಹಲವು ಭಾಷೆಗಳಲ್ಲಿ ಡೈಲಾಗ್‌ಗಳನ್ನೇ ಜನರೇಟ್ ಮಾಡಬಲ್ಲದು. ತಂತ್ರಜ್ಞಾನ ಕರಾರುವಾಕ್ಕಲ್ಲದಿದ್ದರೂ ಒಂದು ಮಟ್ಟಕ್ಕೆ ಸಹಾಯ ಮಾಡೇ ಮಾಡುತ್ತದೆ. ಅದನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳಬೇಕಷ್ಟೆ' ಎಂದಿದ್ದಾರೆ.